ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂ ಹಂಡ್ಕೋ ಯೋಜನೆ ಬಗ್ಗೆ,

೨೨೭ ಶ್ರೀ ಬಿ ಆರ್ ನೀಲಕಂಠಪ್ಪ,(ತರೀಕೇರಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭ ರ ಮಾರ್ಚ್ ತಿಂಗಳಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ ಇಡಬ್ಲ್ಯೂಎಸ್ ಎಲ್‌ಐಜಿ, ಎಂಐಜಿ ಮತ್ತು ಹೆಚ್‌ಐಜಿ ಮನೆಗಳನ್ನು ಹಂಚಿಕೆಗೆ ಕರೆದು ರೂ. ೧,೦೦೦ ದಿಂದ ರೂ. ೧೦,೮೦೦ ರೂಪಾಯಿಗಳವರೆಗೆ ರಿಜಿಸ್ಟ್ರೇಷನ್ ಶುಲ್ಕ ತೆಗೆದುಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಸದರಿ ಯೋಜನೆಗಳು ೧೯೮೭–೮೮ ಅವಧಿಯಲ್ಲಿ ಕಾರ್ಯಗತಗೊಳಿಸುವುದು ಮಂತ್ರಿ ಎರಡು ವರ್ಷದೊಳಗೆ ಎಂದು ತಿಳಿಸಿದರೂ, ಇಲ್ಲಿಯವರೆಗೆ ಮನೆಗಳನ್ನು ಹಂಚಿಕೆ ಮಾಡಿಲ್ಲದಿರುವುದಕ್ಕೆ ಕಾರಣವೇನು ?

ಇ) ಸದರಿ ಮನೆಗಳನ್ನು ಹಂಚಿಕೆ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಆರ್. ವಿ ದೇಶಪಾಂಡೆ,(ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ ೧೯೮೭ ರ ಮಾರ್ಚ್ ಅಧಿಸೂಚನೆಯ ಪ್ರಕಾರ ೫೬೭೪ ಮನೆಗಳನ್ನು ನಿರ್ಮಾಣ ಮಾಡಲು ಮತ್ತು ವಿತರಣೆ ಮಾಡಲು ಪ್ರಸ್ತಾವಿಸಲಾಗಿದ್ದು, ಅದರಲ್ಲಿ ೧೫೫೫ ಮನೆಗಳು ಪೂರ್ಣಗೊಂಡಿದ್ದು ವಿತರಣೆಯಾಗಿದ್ದು ಮತ್ತು ೮೯೮ ಮನೆಗಳನ್ನು ೧೦–೩–೮೯ ರ ಒಳಗಾಗಿ ಪೂರ್ಣಗೊಳಿಸಿ ಹಂಚಲಾಗುವುದು. ಯೋಜನೆಯನ್ನು ಕಾರ್ಯಗೊಳಿಸುವ ಆರಂಭದಲ್ಲಿ ಹಲವಾರು ಪ್ರದೇಶಗಳಿಂದ ಬಂದ ಬೇಡಿಕೆ ಕಡಿಮೆಯಿದ್ದುದರಿಂದ ಯೋಜನೆಯು ಕಾರ್ಯಗತವಾಗಲು ತಡವಾಯಿತು,

ಇ) ಉಳಿದ ೩೨೨೩ ಮನೆಗಳ ನಿರ್ಮಾಣ ವಿವಿಧ ಹಂತದಲ್ಲಿದ್ದು ೧೯೯೦ ರ ಮಧ್ಯಂತರದಲ್ಲಿ ವಿತರಣೆಯಾಗುವ ನಿರೀಕ್ಷೆ ಇದೆ,

ಎನ್. ಆರ್. ಇ. ಪಿ. ಮತ್ತು ಆರ್. ಎಲ್. ಇ. ಜಿ. ಪಿ. ಯೋಜನೆಗಳ ಅನುಷ್ಠಾನದ ಬಗ್ಗೆ

ಶ್ರೀ ಆರ್. ಪೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೮೫–೮೬, ೧೯೮೬–೮೭, ೧೯೮೭–೮೮ ಸಾಲುಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಎನ್.ಆರ್ ಇ.ಪಿ. ಯೋಜನೆ ಹಾಗೂ ಆರ್.ಎಲ್.ಇ.ಜಿ.ಪಿ. ಯೋಜನೆಗಳಲ್ಲಿ ಸರ್ಕಾರದ ಎಷ್ಟು ಹಣವನ್ನು ವೆಚ್ಚ ಮಾಡಿದೆ (ಜಿಲ್ಲಾವಾರು ವಿವರ ನೀಡುವುದು)

ಆ) ಆರ್. ಎಲ್. ಇ. ಜಿ. ಪಿ. ಹಾಗೂ ಎನ್. ಆರ್. ಇ. ಪಿ. ಕೆಲಸಗಳಲ್ಲಿ ಕಳಪೆ ಕೆಲಸಗಳಾಗಿರುವುದು ಕಾರ್ಯದರ್ಶಿಯವರ ಗಮನಕ್ಕೆ ಬಂದಿದೆಯೇ ?

ಇ) ಇದರ ಮೂಲ ಉದ್ದೇಶ ಈಡೇರದೇ ಸದರಿ ಹಣ ಮಧ್ಯವರ್ತಿಗಳಿಂದ ವಿಪರೀತ ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಕಂಟ್ರಾಕ್ಟರುಗಳಿಗೆ ಈ ಕೆಲಸವನ್ನು ವಹಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು).—

ಅ) ಲಗತ್ತಿಸಿರುವ ತಃಖ್ತೆಯಲ್ಲಿ ಕೊಟ್ಟಿರುತ್ತದೆ.

ಆ) ಇಲ್ಲ.

ಇ) ಇಲ್ಲ ಉದ್ಭವಿಸುವುದಿಲ್ಲ.